ಆರೋಪಿಯು ತಲೆಮರೆಸಿಕೊಂಡಿರುವುದರಿಂದ, ಸಾಕ್ಷ್ಯವನ್ನು ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ದಾಖಲಿಸಲಾಯಿತು.

ದಿ.11.11.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ) ಃ

7. FSL ವರದಿ ಬಾಕಿ ಇಟ್ಟು, ದಿ.12.12.2020 ರಂದು ದೋಷಾರೋಪಣಾಪಟ್ಟಿ ಸಲ್ಲಿಸಿರುತ್ತೇನೆ. ದಿ.22.10.2021 ರಂದು FSL ವರದಿ ಮತ್ತು ಸ್ಯಾಂಪಲ್ಲುಗಳನ್ನು ಸ್ವೀಕರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತದೆ. FSL ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-**27** ಎಂದು, ಮಾದರಿ ಸೀಲನ್ನು ನಿಪಿ-**28** ಎಂದು ಗುರುತಿಸಲಾಯಿತು.

8. ಮಾದರಿಗಾಗಿ ತೆಗೆದ ಗಾಂಜಾ ಮೂರು ಪ್ಯಾಕೇಟ್ ನಲ್ಲಿದ್ದು, ಸೀಲ್ ಆದ ಸದರಿ 3 ಪ್ಯಾಕೇಟುಗಳನ್ನು ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದು, ಈ ಹಂತದಲ್ಲಿ ಮಾನ್ಯ ಪಿ.ಪಿ.ಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ ಸೀಲ್ ಆದ ಮೂರು ಪ್ಯಾಕೇಟುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಸದರಿ 3 ಪ್ಯಾಕೇಟುಗಳನ್ನು ಎಂ.ಓ.**5** ರಿಂದ ಎಂ.ಓ.**7** ಎಂದು ಗುರುತಿಸಲಾಯಿತು (ಪಿ.ಎಫ್. 114/2020).

9. ಇನ್ ವೆಂಟರಿ ಮಾಡಿಸಿದ ಬಗ್ಗೆ 3 ಪೋಟೋಗಳನ್ನು ಹಾಜರುಪಡಿಸಿದ್ದು, ಸದರಿ ಪೋಟೋಗಳನ್ನು ಕ್ರಮವಾಗಿ ನಿಪಿ-**29** ರಿಂದ ನಿಪಿ-**31** ಎಂದು ಗುರುತಿಸಲಾಯಿತು. ಜಪ್ತಿ ಮಾಡಿದ ಆಟೋದ 4 ಪೋಟೋಗಳನ್ನು ನಿಪಿ-**32** ರಿಂದ ನಿಪಿ-**35** ಎಂದು ಗುರುತಿಸಲಾಯಿತು.

10. ದಿ.12.09.2020 ರಲ್ಲಿ 3 ಜನ ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿದ್ದು, ಅವರು ಮುದ್ದೆಮಾಲನ್ನು ಶಿವಮೊಗ್ಗದ ಕಾಡಿನಿಂದ ತಂದಿರುವುದಾಗಿ ಹೇಳಿರುತ್ತಾರೆ. ಈ ಪ್ರಕರಣದ ತಲೆಮರೆಸಿಕೊಂಡ 3 ನೇ ಆರೋಪಿ ಪ್ರಮೋದನನ್ನು ನೋಡಿದಲ್ಲಿ ಗುರುತಿಸುತ್ತೇನೆ.

<u>ಪಾಟೀ ಸವಾಲು ಃ</u> ಪ್ರಸ್ತುತ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.